ಸಿ.ಸಿ ನಂಬ್ರಃ 852/2023
ಪಿ.ಡಬ್ಲ್ಯೂ : 1

ದಿನಾಂಕಃ 13-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಆರ್ ಕೆ ಎಮ್ ವಕೀಲರಿಂದ

1. ಈ ಸಾಲಕ್ಕೆ ಆರೋಪಿತ ಹಾಗೂ ಶೋಭಾರವರು ಜಾಮೀನುದಾರರು. ಈ ಸಾಲಕ್ಕೆ ಮುಖ್ಯ ಸಾಲಗಾರರು ಶ್ರೀಕಾಂತ ಬಿಲ್ಲವ. ಈ 3 ಜನಕ್ಕೆ ಸಂಬಂಧಪಟ್ಟ ಕರಾರು ಪತ್ರ ಒಂದೇ ಇರುತ್ತದೆ. ಆ ಕರಾರು ಪತ್ರದ ದಿನಾಂಕ 26-08-2021. ನಾನು ಶೋಭಾರವರ ಮೇಲೆ ಚೆಕ್ ಅಮಾನ್ಯ ಪ್ರಕರಣ ಸಲ್ಲಿಸಿರುತ್ತೇನೆ. ಅದರ CC ನಂಬ್ರ ನೆನಪಿರುವುದಿಲ್ಲ. ಆ ಪ್ರಕರಣ ನಡೆಯುತ್ತಿರುತ್ತದೆ. ಮುಖ್ಯ ಸಾಲಗಾರರಾದ ಶ್ರೀಕಾಂತ ಬಿಲ್ಲವರ ಮೇಲೆ ಚೆಕ್ ಅಮಾನ್ಯ ಪ್ರಕರಣ ಸಲ್ಲಿಸಿರುತ್ತೇನೆ. ಸಾಲಕ್ಕೆ ಸಂಬಂಧಪಟ್ಟ ಮುಖ್ಯ ಸಾಲಗಾರ ಹಾಗೂ ಇಬ್ಬರು ಜಾಮೀನುದಾರರು ಎಲ್ಲರ ಮೇಲೆ ಪ್ರಕರಣ ದಾಖಲಿಸಿರುತ್ತೇವೆ.

2. ಆರೋಪಿತನ ಮೇಲೆ ದಾಖಲಿಸಿದ ಪ್ರಕರಣದಲ್ಲಿ ಉಳಿದ ಇಬ್ಬರ ಮೇಲೆ ಪ್ರಕರಣ ದಾಖಲಿಸಿದ ಬಗ್ಗೆ ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಉದ್ದೇಶಪೂರ್ವಕವಾಗಿ ಆ ವಿಚಾರವನ್ನು ಮುಚ್ಚಿಟ್ಟಿರುತ್ತೇವೆ ಎಂದರೆ ಸರಿಯಲ್ಲ.ನಮ್ಮ ಸಂಸ್ಥೆಗೂ ಆರೋಪಿಗೂ ಯಾವ ರೀತಿ ವ್ಯವಹಾರ ಎಂಬುದನ್ನು ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿ ಕರಾರು ಇರುತ್ತದೆ ಎಂದು ನುಡಿಯುತ್ತಾರೆ. ದೂರಿನಲ್ಲಿ ಎಲ್ಲಾ ವಿಚಾರವನ್ನು ಹೇಳಲು ನಮಗೆ ತೊಂದರೆ ಇರಲಿಲ್ಲ. ಇದು ಸಹ ಮೀನು ಕೊಟ್ಟಿದ್ದಕ್ಕೆ ಸಂಬಂಧಪಟ್ಟ ವ್ಯವಹಾರ ಇರುತ್ತದೆ.

3. ಮೀನನ್ನು ಹರಾಜು ಮಾಡಿದ್ದು ದೀರ್ಘ ಕಾಲವಾಗಿರುತ್ತದೆ. ಆಗಸ್ಟ್ ನಿಂದ ಮೇ ವರೆಗಿನ ವ್ಯವಹಾರ ಆಗಿರುತ್ತದೆ. ಈ ಪ್ರಕರಣದಲ್ಲಿ ವ್ಯವಹಾರ ಮಾಡಿದ ಸಂಖ್ಯೆ ಮೀನು ಖರೀದಿ ಸಂಖ್ಯೆ108 ಬಾರಿ. ನಮ್ಮದು ಸಂಸ್ಥೆ ಆಗಿರುವುದರಿಂದ ಮೀನು ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲೆ ಹಾಗೂ ರಶೀದಿಗಳು ಪಾರದರ್ಶಕವಾಗಿರಬೇಕು ಎಂದರೆ ಸರಿ. ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ 108 ರಶೀದಿಗಳು ಇರುತ್ತದೆ. ಚೆಕ್ ನ ಮೊತ್ತ ಆ ಬಿಲ್ಲುಗಳ ಆಧಾರದ ಮೇಲೆ ನಿರ್ಧರಿಸಲ್ಪಟ್ಟಿರುತ್ತದೆ. ಆ ಬಿಲ್ಲುಗಳನ್ನು ಹಾಜರು ಪಡಿಸಲು ನನಗೆ ಯಾವುದೇ ಅಡ್ಡಿ, ಆತಂಕ, ತೊಂದರೆ ಇರಲಿಲ್ಲ.

4. ಶ್ರೀಕಾಂತ ಬಿಲ್ಲವರವರು ವ್ಯವಹಾರ ಮಾಡಿದಾಗ ನಗದು ಹಾಗೂ ಚೆಕ್ ಕೊಟ್ಟಿರುತ್ತಾರೆ. ನಾವು ನಗದಾಗಿ ಹಣ ಪಾವತಿಸಿದಾಗ ರಶೀದಿಗಳನ್ನು ಕೊಡುತ್ತೇವೆ. ಸಾಲದಲ್ಲಿ ಕೊಟ್ಟಂತಹ ಬಿಲ್ಲುಗಳಿಗೆ ಸಾಲ ಪಡೆದುಕೊಳ್ಳುವವರ ಸಹಿಯನ್ನು ಪಡೆಯುತ್ತೇವೆ. ಆರೋಪಿಯ ಎಷ್ಟು ಸಹಿ ಇದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಶೋಭಾ ಹಾಗೂ ಶ್ರೀಕಾಂತ ಬಿಲ್ಲವರವರು ಸಹಿಗಳು ಇರುತ್ತವೆ. ಆದರೆ ಎಷ್ಟು ಇರುತ್ತದೆ ಎಂದು ಹೇಳಲು ಆಗುವುದಿಲ್ಲ. ಆರೋಪಿತ ಯಾವುದೇ ಮೀನನ್ನು ರಶೀದಿಯ ಮೇಲೆ ಖರೀದಿಸಿಲ್ಲ ಆದ್ದರಿಂದ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಕಚೇರಿಯಲ್ಲಿ ರಶೀದಿ ಇರುತ್ತದೆ ಎಂದು ನುಡಿಯುತ್ತಾರೆ.

5. ಮುಖ್ಯ ಸಾಲಗಾರರನ್ನು ಪೀಡಿಸಲು ಹಾಗೂ ಹೆಚ್ಚಿನ ಹಣವನ್ನು ಪಡೆಯುವ ಸಲುವಾಗಿ ಇಬ್ಬರು ಜಾಮೀನುದಾರರ ಮೇಲೆ ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.. ಕರಾರು ಮಾಡುವಾಗ ಅದು ಖಾಲಿ ಫಾರಂ ಇತ್ತು ಎಂದರೆ ಸರಿಯಲ್ಲ. ಅದನ್ನು ಭರ್ತಿ ಮಾತಿ ಸಹಿ ಮಾಡಿರುತ್ತೇನೆ. ಆರೋಪಿಯ ವಿಧ್ಯಾಭ್ಯಾಸ ಗೊತ್ತಿರುವುದಿಲ್ಲ. ಆರೋಪಿಯ ಸಹಿ ಪಡೆಯುವಾಗ ಆ ದಾಖಲೆಯನ್ನು ಅವರಿಗೆ ಓದಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ರಿತ ದಾಖಲೆಯನ್ನು ಹಾಜರು ಮಾಡಿದ್ದು ಅದನ್ನು ಭರ್ತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ರಿತ ದಾಖಲೆಯಲ್ಲಿರುವ ಕೈ ಬರಹ ನನ್ನದು.ಅನುಕೂಲಕರವಾಗಿ ನಾನು ಬರೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮೀನು ವ್ಯಾಪಾರಕ್ಕೆ ಮುಂಚಿತವಾಗಿ ಕರಾರು ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

5. ಆರೋಪಿಯದ್ದು 1 ಕೋಟಿ 81 ಲಕ್ಷದ 80 ಸಾವಿರ ರೂ. ಪಾವತಿ ಆಗಿರುತ್ತದೆ. ಮೀನನ್ನು ಸಾಲವಾಗಿ ಕೊಟ್ಟಾಗ ನಾವು ಕಾಪಾಡಿಕೊಳ್ಳುವ ಬಿಲ್ಲುಗಳನ್ನು ಮೀನು ಕಡ ಮಾರಾಟ ಬಿಲ್ಲುಗಳು ಎಂದು ಕರೆಯಲ್ಪಡುತ್ತದೆ. ಅದು ನಮ್ಮ ತಾವಾದಲ್ಲಿ ಇರುತ್ತದೆ ಎಂದರೆ ಸರಿ. ಆದ ಕಾರಣ ಅದನ್ನು ನಾವು ಮನಸ್ಸೋ ಇಚ್ಚೆ ಬರೆಯುತ್ತೇವೆ ಎಂದರೆ ಸಾಕ್ಷಿ ಆ ರೀತಿ ಬರೆಯಲು ಸಾಧ್ಯ ಇರುವುದಿಲ್ಲ ಎಂದು ನುಡಿಯುತ್ತಾರೆ. ಆದ ವ್ಯವಹಾರದ ಬಗ್ಗೆ ವ್ಯವಹಾರ ಆದ ತಕ್ಷಣ ಯಾವುದೇ ಅಧಿಕಾರ ಕೇಂದ್ರಕ್ಕೆ ಮಾಹಿತಿ ಕೊಡುವ ಪದ್ಧತಿ ಇರುವುದಿಲ್ಲ. ಯಾವುದೇ ನಿಯಂತ್ರಣ ಇಲ್ಲದ ಕಾರಣ ಬೇಕಾಬಿಟ್ಟಿ ಬಿಲ್ಲುಗಳನ್ನು ಹಾಕುತ್ತೇವೆ ಎಂದರೆ ಸರಿಯಲ್ಲ.

6. ಆಂತರಿಕ ಲೆಕ್ಕ ಪರಿಶೋಧಕರು ಲೆಕ್ಕ ಪರಿಶೋಧನೆ ಮಾಡುತ್ತಾರೆ. ಅವರು ಖಾಸಗಿ ವ್ಯಕ್ತಿಗಳು. ಅವರ ಹೆಸರು ಜಿ ಜೆ ಪಿಂಚೆಗಾನ್. ಅವರು ಗೋಕರ್ಣದವರು. ನಾನು

ನ್ಯಾಯಲಯದಲ್ಲಿ ಹಾಜರು ಪಡಿಸಿದ ದಾಖಲೆಗಳಲ್ಲಿ ಅವರ ಸಹಿ ಆಗಲಿ, ಚಿಕ್ಕ ಸಹಿ ಆಗಲಿ, ಲೆಕ್ಕ ಪರಿಶೋಧನೆಯ ಟಿಪ್ಪಣಿ ಇದೆಯಾ ಎಂದರೆ ಸಾಕ್ಷಿ ಕಚೇರಿಯಲ್ಲಿ ಇದೆ ಎಂದು ನುಡಿಯುತ್ತಾರೆ. ನಾನು 4- 5 ಪ್ರಕರಣದಲ್ಲಿ ಸಾಕ್ಷಿ ಹೇಳಿರಬಹುದು.

ಈ ಸಂದರ್ಭದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**